ಸಭೆಯು 11.30ಕ್ಕೆ ಸಮಾವೇಶಗೊಂಡಿತು.

ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು.

1. ವರದಿಯನ್ನೊಪ್ಪಿಸುವುದು.

2006–7ನೇ ಸಾಲಿನ ಅಧೀನ ಶಾಸನ ರಚನಾ ಸಮಿತಿಯ 34ನೇ ವರದಿ

ಅಧ್ಯಕ್ಷರು: ಎನ್. ಯೋಗೀಶ್ ಭಟ್, ಅಧ್ಯಕ್ಷರು, ಅಧೀನ ಶಾಸನ ರಚನಾ ಸಮಿತಿ ಇವರ ಹೆಸರಿನಲ್ಲಿರುವ 2006–07ನೇ ಸಾಲಿನ ಅಧೀನ ಶಾಸನ ರಚನಾ ಸಮಿತಿಯ 34ನೇ ವರದಿಯನ್ನು ಸಭೆಗೆ ಒಪ್ಪಿಸುತ್ತಿದ್ದೇನೆ.

2. ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಕಟ್ಟಾಸುಬ್ರಮಣ್ಯ ನಾಯ್ಡು(ಕೈಗಾರಿಕಾ ಸಚಿವರು) (ಶ್ರೀ ಬಿ.ಎಸ್ ಯಡಿಯೂರಪ್ಪ, ಉಪಮುಖ್ಯಮಂತ್ರಿಗಳ ಪರವಾಗಿ): ಮಾನ್ಯ ಅಧ್ಯಕ್ಷರೆ, 2004ರ ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಸಂರಕ್ಷಣೆ ಅಧಿನಿಯಮ 21(2)ರ ಪ್ರಕರಣದ ಮೇರೆಗೆ : ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆ ನಿಯಮ 2006 ನ್ನು ದಿನಾಂಕ 05.02.2007ಕ್ಕೆ ಅನ್ವಯವಾಗುವಂತೆ ಹೊರಡಿಸಲಾದ ಅಎ 44 ಟಿ ಎ ಆರ್ 2006ನೇ ಸಂಖ್ಯೆಯ ಅಧಿಸೂಚನೆಯನ್ನು ಮಂಡಿಸುತ್ತೇನೆ.

ಅಧ್ಯಕ್ಷರು: ಮಂಡಿಸಲಾಯಿತು

3. ನಿಲುವಳಿ ಸೂಚನೆ ಮೇಲೆ ಚರ್ಚೆಗೆ ಅನುಮತಿ ಕೋರಿಕೆ.

ವಿಷಯ: ನಂಜುಂಡಪ್ಪನವರ ವರದಿ ಅನುಷ್ಠಾನದ ಬಗ್ಗೆ.

ಶ್ರೀ ಬಿ.ಆರ್.ಪಾಟೀಲ್: ಮಾನ್ಯ ಅಧ್ಯಕ್ಷರೆ, ನಾನು ಸುಮಾರು ಐದು ಸಲ ಈ ನೋಟೀಸನ್ನು ಕೊಟ್ಟಿದ್ದೆ. ಆದರೆ ಅದು ಕಾರಣಾಂತರದಿಂದ ಬರಲಿಲ್ಲ. ಸದನ ಇನ್ನು ಎರಡು ದಿವಸ ಮಾತ್ರ ಇದೆ. ನಾವು ಹೈದರಾಬಾದ್–ಕರ್ನಾಟಕದ ಎಲ್ಲಾ 14 ಜನ ಶಾಸಕರು ಸಹಿ ಹಾಕಿ ತಮಗೆ ಒಂದು ನೋಟೀಸನ್ನು ಕೊಟ್ಟಿದ್ದೇವೆ ದಯಮಾಡಿ ನಮ್ಮ ಹಿರಿಯ ನಾಯಕರಾದ ಖರ್ಗೆಯವರು ಮಾತನಾಡುತ್ತಾರೆ. ದಯಮಾಡಿ ತಾವು ಅದಕ್ಕೆ ಅವಕಾಶ ಮಾಡಿಕೊಟ್ಟು ತಮಗೆ ಮನವರಿಕೆಯಾದರೆ ಚರ್ಚೆಗೆ ಅವಕಾಶ ಮಾಡಿಕೊಡಿ. ಇಲ್ಲದಿದ್ದರೆ ಎರಡು ದಿವಸ ಸದನ ಮುಗಿದ ಮೇಲೆ ಏನು ಸರ್ಕಾರ ನಂಜುಂಡಪ್ಪ ವರದಿ ಅನುಷ್ಠಾನ